**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:9**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:15**

| | | |
|---|---|---|
| **ಸಾಕ್ಷಿದಾರರ ಹೆಸರು** | : | ರಾಘವೇಂದ್ರ |
| **ತಂದೆ ಹೆಸರು** | : | ಶಿವರಾಂ |
| **ವಯಸ್ಸು** | : | 27 |
| **ವೃತ್ತಿ** | : | ಕೂಲಿ |
| **ವಾಸ** | : | ಪಡುಕೋಣೆ ಗ್ರಾಮ |

**ದಿನಾಂಕ: 28-04-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇದೆ ಹಾಗೂ ಚಾಸಾ.1 ರಿಂದ 5 ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿಗಳು ನಾಡಗುಡ್ಡೆಯಂಗಡಿ ಪೇಟೆಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಬಳಿ ಚಾಸಾ.1 ರಿಂದ 5 ರವರಿಗೆ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಸದ್ರಿ ಸ್ಥಳದಲ್ಲಿ ಪಂಚನಾಮೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ.7 ಮಹಜರಿಗೆ ಸುಮಾರು 3 ವರ್ಷಗಳ ಹಿಂದೆ ಪೋಲೀಸು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.7 ಬಿ ಎಂದು ಗುರುತಿಸಲಾಯಿತು. ನಿಪಿ.7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ.7 ಕ್ಕೆ ಸಹಿ ಹಾಕುವ ಸಮಯದಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ.

ಈಗ ನನಗೆ ತೋರಿಸಿದ ನಿಪಿ.8 ನಕಾಶೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿ ಸಹಿಯನ್ನು ನಿಪಿ.8 ಬಿ ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಸಹಾ ನಾನು ಠಾಣೆಯಲ್ಲೇ ಹಾಕಿರುತ್ತೇನೆ. ಈಗ ನನಗೆ ತೋರಿಸಿದ ನಿಪಿ.9 ಛಾಯಾಚಿತ್ರಗಳಲ್ಲಿ ನಾನು ಕಂಡು

ಬರುತ್ತೇನೆ. ಸದ್ರಿ ಛಾಯಾಚಿತ್ರಗಳನ್ನು ಎಲ್ಲಿ ಯಾವಾಗ ಮತ್ತು ಯಾಕೆ ತೆಗೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ22-09-2023 ರಂದು ಪೋಲೀಸರು ಸ್ಥಳ ತನಿಖೆಗಾಗಿ ನಾಡಾ ಗ್ರಾಮದ ಪೇಟೆಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಎದುರುಗಡೆ ಬಂದಾಗ ನಾನು ಪಂಚನಾಗಿ ಹಾಜರಿದ್ದೆ ಎಂದರೆ ಸರಿ ಅಲ್ಲಾ. ಆ ಸಮಯದಲ್ಲಿ ಚಾಸಾ.4 ರವರು ತಕ್ಷೀರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲೀಸರ ನನ್ನ ಹಾಗೂ ಚಾಸಾ.16 ರವರ ಸಮಕ್ಷಮ ನಿಪಿ.7 ರಂತೆ ಪಂಚನಾಮೆ ತಯಾರಿಸಿ ಸ್ಥಳದಲ್ಲೇ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ ಅಲ್ಲಾ. ಅದೇ ಸಮಯ ಆರೋಪಿತರು ಕೃತ್ಯಕ್ಕೆ ಬಳಸಿದ ದೊಣ್ಣೆಯನ್ನು ಅದೇ ಸ್ಥಳದಿಂದ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಅದೇ ಸಮಯ ನಿಪಿ.8 ರಂತೆ ನಕಾಶೆಯನ್ನು ತಯಾರಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ ಅಲ್ಲಾ. ಅದೇ ಸಮಯ ನಿಪಿ.9 ರ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿ ಅಲ್ಲಾ.

ನಿಪಿ.7 ರ ಮಹಜರಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ಪಾಟೀ ಸವಾಲುಃ 1 ರಿಂದ 7 ನೇ ಆರೋಪಿ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ